


**SARAYU** - Kannada Monthly Regn. No. KARKAN/2014/62363
**Vol. : 9 Issue : 3 Month - August 5124**/ ಶುಭಕೃತ್ ಸಂವತ್ಸರ ಆಗೋಸ್ಟ್ 2022 ಪುಟ 8 **Rs. 10/-**

Postal Regn No. PTR/136/2022-24
Licensed to Post without pre-payment
License No: SK/WPP/PTR/117/2022-24

## ರಾಷ್ಟ್ರೀಯ ಶಿಕ್ಷಣ ನೀತಿಯನ್ವಯ 9, 10, 11, 12ನೇ ತರಗತಿಗಳನ್ನೊಳಗೊಂಡ ಆಂಗ್ಲ ಮಾಧ್ಯಮ ಶಾಲೆ

# ಶ್ರೀರಾಮ ಸೆಕೆಂಡರಿ ಸ್ಕೂಲ್ – ಉದ್ಘಾಟನೆ

ಶ್ರೀರಾಮ ವಿದ್ಯಾಕೇಂದ್ರದ ನೂತನ ಸಂಸ್ಥೆಯನ್ನು ದಿನಾಂಕ 02.07.2022ರಂದು ಕರ್ನಾಟಕ ಸರಕಾರದ ಸನ್ಮಾನ್ಯ ಶಿಕ್ಷಣ ಸಚಿವರಾದ ಮಾನ್ಯ ಶ್ರೀ ಬಿ.ಸಿ. ನಾಗೇಶ್‌ರವರು ಉದ್ಘಾಟಿಸಿ, "ಸ್ವಾವಲಂಬಿ, ಸ್ವಾಭಿಮಾನಿ ಸಮಾಜದ ನಿರ್ಮಾಣಕ್ಕೆ ಒತ್ತು ನೀಡುವ ಆಶಯಕ್ಕೆ ಪೂರಕವಾಗಿ ಆರಂಭಗೊಳ್ಳುತ್ತಿರುವ ಈ ಸಂಸ್ಥೆ ಈಗಾಗಲೇ ಈ ಮಾರ್ಗದಲ್ಲಿ ಬಹಳಷ್ಟು ದೂರ ಸಾಗಿ ಬಂದಿದೆ. ಮುಂದೆಯೂ ಸಂಸ್ಥೆಯ ಕಾರ್ಯ ಇನ್ನಷ್ಟು ಎತ್ತರಕ್ಕೇರಲಿ. ಆ ಮೂಲಕ ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿ ಪ್ರತಿಪಾದಿತವಾದ ಭಾರತ ಕೇಂದ್ರಿತ ಶಿಕ್ಷಣ ಪದ್ಧತಿ ಪ್ರಭಾವಿಯಾಗಿ ಮೂಡಿ ಬರಲಿ" ಎಂದರು.

















ಬಂಟ್ವಾಳ ಕ್ಷೇತ್ರದ ಸನ್ಮಾನ್ಯ ಶಾಸಕರಾದ ಮಾನ್ಯ ಶ್ರೀ ರಾಜೇಶ್ ನ್ಯಾಕ್ ಅಧ್ಯಕ್ಷತೆ ವಹಿಸಿದ್ದ ಈ ಕಾರ್ಯಕ್ರಮದಲ್ಲಿ ವಿವೇಕಾನಂದ ವಿದ್ಯಾವರ್ಧಕ ಸಂಘ, ಪುತ್ತೂರು ಇದರ ಅಧ್ಯಕ್ಷರಾದ ಡಾ। ಪ್ರಭಾಕರ ಭಟ್ ಕಲ್ಲಡ್ಕ ಪ್ರಾಸ್ತಾವಿಕ ನುಡಿಗಳನ್ನಾಡಿದರು.

ಬಂಟ್ವಾಳ ತಹಶೀಲ್ದಾರ್ ಡಾ. ಸ್ಮಿತಾ ರಾಮು ಯಜ್ಞಕುಂಡಕ್ಕೆ ಘೃತಾಹುತಿ ನೀಡಿ ಪ್ರಾರಂಭೋತ್ಸವ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಉದ್ಯಮಿ ಶ್ರೀ ಉದಯಕುಮಾರ್ ಶೆಟ್ಟಿ ಮುನಿಯಾಲು ಉಪಸ್ಥಿತರಿದ್ದರು.

ಶ್ರೀ ಗುರುಪುರ ವಜ್ರದೇಹಿ ಮಠದ ಪೂಜ್ಯ ಶ್ರೀ ಶ್ರೀ ರಾಜಶೇಖರಾನಂದ ಸ್ವಾಮೀಜಿಯವರು ಆಶೀರ್ವಚನ ನೀಡಿ, ವಿದ್ಯಾರ್ಥಿಗಳಿಗೆ ಮತ್ತು ಪೋಷಕರಿಗೆ ಫಲ–ಮಂತ್ರಾಕ್ಷತೆಯಿತ್ತು ಹರಸಿದರು. ಜಿಲ್ಲಾ ವಿದ್ಯಾಂಗ ಉಪನಿರ್ದೇಶಕ ಶ್ರೀ ಕೆ.ಸುಧಾಕರ್, ಕ್ಷೇತ್ರ ಶಿಕ್ಷಣಾಧಿಕಾರಿ ಶ್ರೀ ಜ್ಞಾನೇಶ್, ವಿದ್ಯಾಕೇಂದ್ರದ ಅಧ್ಯಕ್ಷ ಶ್ರೀ ಬಿ.ನಾರಾಯಣ ಸೋಮಯಾಜಿ, ಸಂಚಾಲಕ ಶ್ರೀ ವಸಂತ ಮಾಧವ, ಸಹಸಂಚಾಲಕ ಶ್ರೀ ರಮೇಶ್ ಎನ್, ಡಾ.ಕಮಲಾ ಪ್ರ. ಭಟ್, ಉಪಸ್ಥಿತರಿದ್ದರು.

ಅಭ್ಯಾಗತರನ್ನು ಪೂರ್ಣಕುಂಭದೊಂದಿಗೆ ಬರಮಾಡಿ, ಭರತನಾಟ್ಯದೊಂದಿಗೆ ಸ್ವಾಗತಿಸಲಾಯಿತು. ಘಂಟಾನಾದದ ಮೂಲಕ ಪರದೆ ಸರಿಸಿ, ದೀಪ ಬೆಳಗಿ, ಸೆಕೆಂಡರಿ ಸ್ಕೂಲ್ ವಿಭಾಗವನ್ನು ಉದ್ಘಾಟಿಸಲಾಯಿತು. ನೂತನ ವಿದ್ಯಾರ್ಥಿಗಳೆಲ್ಲರು ಅಗ್ನಿಕುಂಡಕ್ಕೆ ಘೃತಾಹುತಿ ನೀಡಿ, ಭಾರತ ಮಾತೆಯನ್ನು ಅರ್ಚಿಸಿ, ಆಶೀರ್ವಾದಪೂರ್ವಕ ತಿಲಕ ಧರಿಸಿದರು. ಭಗವದ್ಗೀತೆಯ 18 ಅಧ್ಯಾಯ ಕಂಠಸ್ಥ ಮಾಡಿರುವ ವಿದ್ಯಾರ್ಥಿನಿ ವಾಸವಿಯನ್ನು ಸನ್ಮಾನಿಸಲಾಯಿತು.



**ಮಾಹಿತಿ ಕಾರ್ಯಾಗಾರ 08.07.2022**

ಶ್ರೀರಾಮ ಶಿಶುಮಂದಿರದ ಎಲ್ಲಾ ಮಾತಾಜಿಗಳಿಗೆ ದೈನಂದಿನ ಚಟುವಟಿಕೆಯ ಅಭ್ಯಾಸ ಕಾರ್ಯಾಗಾರ ನಡೆಸಲಾಯಿತು. ಪ್ರತಿನಿತ್ಯ ಹೇಳುವ ನೈಮಿತ್ತಿಕ ಶ್ಲೋಕ, ಪಂಚಾಂಗಗಳನ್ನು ಪರಿಚಯಿಸಲಾಯಿತು.



**ಗುರುಪೂಜಾ ಕಾರ್ಯಕ್ರಮ 18.07.2022**

ವಿದ್ಯಾಭಾರತಿ ಶಿಶುಶಿಕ್ಷಣ ಕ್ಷೇತ್ರೀಯ ಪ್ರಮುಖರಾದ ಶ್ರೀಮತಿ ತಾರಾ ಮಾತಾಜಿ ಹಾಗೂ ಶಿಶುಮಂದಿರದ ವ್ಯವಸ್ಥಾಪಕರಾದ ಶ್ರೀಮತಿ ಸುಧಾ ಭಟ್ ಉಪಸ್ಥಿತರಿದ್ದರು. ಶ್ರೀಮತಿ ದಿವ್ಯಾ ಮಾತಾಜಿ ಗುರುಪೂಜೆಯ ಮಹತ್ವವನ್ನು ತಿಳಿಸಿದರು.



**ಆಡಳಿತ ಮಂಡಳಿಯ ಬೈಠಕ್ 22.7.2022**

ಶ್ರೀ ಕೃಷ್ಣ ಶಿಶುಮಂದಿರದ ಆಡಳಿತ ಮಂಡಳಿಯ ಬೈಠಕ್‌ನಲ್ಲಿ ವಿದ್ಯಾಕೇಂದ್ರದ ಸಂಚಾಲಕರು ಶ್ರೀ ವಸಂತ ಮಾಧವ ಮಾರ್ಗದರ್ಶನ ಮಾಡಿದರು. ಆಡಳಿತ ಮಂಡಳಿಯ ಒಟ್ಟು 8 ಸದಸ್ಯರು ಉಪಸ್ಥಿತರಿದ್ದರು.

## ಪ್ರಾಥಮಿಕ ಶಾಲೆ



**ತಾಲೂಕು ಮಟ್ಟಕ್ಕೆ ಆಯ್ಕೆ : 19.7.2022**

ಕಲ್ಲಡ್ಕ ವಲಯ ಮಟ್ಟದ ಚೆಸ್ ಸ್ಪರ್ಧೆಯಲ್ಲಿ 7ನೇ ತರಗತಿ ಅಂಕಿತಾ ಬಿ ಪ್ರಥಮ ಸ್ಥಾನ ಮತ್ತು ಅರವಿಂದ ತೃತೀಯ ಸ್ಥಾನ ಪಡೆದು ತಾಲೂಕು ಮಟ್ಟಕ್ಕೆ ಆಯ್ಕೆಯಾಗಿದ್ದಾರೆ.



**ಸವಿಜೇನು : ಜೇನುಕೃಷಿ ಪ್ರಾತ್ಯಕ್ಷಿಕೆ : 21.7.2022**

ಸವಿಜೇನು ಪಾಠಕ್ಕೆ ಸಂಬಂಧಿಸಿದಂತೆ ಮಾಹಿತಿ ಕಾರ್ಯಾಗಾರವನ್ನು ಹಮ್ಮಿಕೊಳ್ಳಲಾಗಿತ್ತು. ಉಮಾಶಿವ ಕ್ಷೇತ್ರದ ಅಧ್ಯಕ್ಷರಾದ ಶ್ರೀ ರಾಕೋಡಿ ಈಶ್ವರ ಭಟ್ ಮಾಹಿತಿ ನೀಡಿದರು.



**ಆರೋಗ್ಯ ಮಾಹಿತಿ : 22.7.2022**

ವಿಟ್ಲ ಸಮುದಾಯ ಕೇಂದ್ರದ ವತಿಯಿಂದ ರಾಷ್ಟ್ರೀಯ ಕಿಶೋರ ಸ್ವಾಸ್ಥ್ಯ ಕಾರ್ಯಕ್ರಮದಡಿಯಲ್ಲಿ ವಿದ್ಯಾರ್ಥಿನಿಯರಿಗೆ ನಡೆದ ಆರೋಗ್ಯ ಮಾಹಿತಿ ಶಿಬಿರ.



**ಕಾರ್ಗಿಲ್ ಸಂಸ್ಮರಣೆ : 26.7.2022**

ಕಾರ್ಗಿಲ್ ವಿಜಯೋತ್ಸವದ ದಿನವನ್ನು ನಿವೃತ್ತ ಸೈನಿಕರೊಂದಿಗೆ ಆಚರಿಸಲಾಯಿತು. ಆ ದಿನದಂದು ವಿಶೇಷವಾಗಿ ಸೈನಿಕ ದಂಪತಿಗಳನ್ನು ಆಹ್ವಾನಿಸಲಾಗಿತ್ತು. ಅವರೆಲ್ಲರಿಗೂ ಗೌರವ ಸಮರ್ಪಣೆ ಮಾಡಲಾಯಿತು.



**ಶಾಲಾ ಮಟ್ಟದ ಪ್ರತಿಭಾ ಕಾರಂಜಿ : 30.7.2022**

ಛದ್ಮವೇಷ, ಮಣ್ಣಿನ ಮಾದರಿ ತಯಾರಿ, ಹಾಸ್ಯ, ಚಿತ್ರಕಲೆ, ಕಂಠಪಾಠ, ಭಾಷಣ, ಭಕ್ತಿಗೀತೆ, ಧಾರ್ಮಿಕ ಪಠಣ, ಅಭಿನಯ ಗೀತೆ, ಲಘುಸಂಗೀತ ಇತ್ಯಾದಿ ಸ್ಪರ್ಧೆಗಳನ್ನು ಆಯೋಜಿಸಲಾಯಿತು.



**ವಿದ್ಯಾಭಾರತಿ ಶೈಕ್ಷಣಿಕ ಸಹಮಿಲನದಲ್ಲಿ ಭಾಗಿ**

ದಿ:16.07.2022 ಮಂಗಳೂರಿನ ಶಕ್ತಿ ವಿದ್ಯಾಸಂಸ್ಥೆಯಲ್ಲಿ ನಡೆದ ದ.ಕ ಜಿಲ್ಲಾ ಶೈಕ್ಷಣಿಕ ಸಹಮಿಲನದಲ್ಲಿ ಶ್ರೀರಾಮ ಶಿಶುಮಂದಿರ– ಪ.ಪೂರ್ವ ವಿಭಾಗದವರೆಗಿನ ಎಲ್ಲಾ ಬೋಧಕ ಬೋಧಕೇತರ ವೃಂದದವರು ಭಾಗವಹಿಸಿದರು.

## ಪ್ರೌಢಶಾಲೆ



**ವಲಯ ಮಟ್ಟದ ಶಟಲ್ ಬ್ಯಾಡ್ಮಿಂಟನ್ 12.07.2022**

14 ಮತ್ತು 17ರ ವಯೋಮಾನದ ವಲಯ ಮಟ್ಟದ ಶಟಲ್ ಬ್ಯಾಡ್ಮಿಂಟನ್ ಪ್ರೌಢಶಾಲಾ ಬಾಲಕರ ವಿಭಾಗದಲ್ಲಿ ಶ್ರೀರಾಮ ಪ್ರೌಢಶಾಲೆಯು ದ್ವಿತೀಯ ಹಾಗೂ ಬಾಲಕಿಯರ ವಿಭಾಗದಲ್ಲಿ ಪ್ರಥಮ ಸ್ಥಾನ ಪಡೆದುಕೊಂಡಿದೆ.



**ಗುರುವಂದನ ಕಾರ್ಯಕ್ರಮ 13/02/2022**

ಈ ಕಾರ್ಯಕ್ರಮದಲ್ಲಿ ಶ್ರೀ ಕಾಂಚನ ಪ್ರೌಢಶಾಲೆಯ ಮುಖ್ಯೋಪಾಧ್ಯಾಯರಾಗಿದ್ದ ಶ್ರೀ ಸುಬ್ರಹ್ಮಣ್ಯ ಬಡಕ್ಕಿಲ, ನಿವೃತ್ತ ಮುಖ್ಯೋಪಾಧ್ಯಾಯಿನಿ, ಶ್ರೀಮತಿ ವಸಂತಿಕುಮಾರಿ ಹಾಗೂ ಕೇಶವ ಆಚಾರ್ಯ ಇವರನ್ನು ಗೌರವಿಸಲಾಯಿತು.



16/07/2022ರಂದು ವಿಠಲ ಪ್ರೌಢಶಾಲೆಯಲ್ಲಿ ನಡೆದ ತಾಲೂಕು ಮಟ್ಟದ ತಾಲೂಕು ಮಟ್ಟದ ಶಟಲ್ ಬ್ಯಾಡ್ಮಿಂಟನ್ ಸ್ಪರ್ಧೆಯಲ್ಲಿ ಶ್ರೀರಾಮ ಪ್ರೌಢಶಾಲೆಯ 17ರ ವಯೋಮಾನದ ಬಾಲಕಿಯರ ವಿಭಾಗದಲ್ಲಿ ದ್ವಿತೀಯ ಪ್ರಶಸ್ತಿಯನ್ನು ಪಡೆದುಕೊಂಡಿದ್ದಾರೆ

# ಸುಭಾಷಿತ ಮಂಜರಿ

**ನಿಷ್ಣಾತೋಪಿ ಚ ವೇದಾಂತೇ**
**ಸಾಧುತ್ವಂ ನೈತಿ ದುರ್ಜನಃ**
**ಚಿರಂ ಜಲನಿಧೌ ಮಗ್ನಃ**
**ಮೈನಾಕ ಇವ ಮಾರ್ದವಮ್**

**ಎಷ್ಟೇ ವೇದಾಂತ ಶಾಸ್ತ್ರದಲ್ಲಿ ನಿಪುಣನಾಗಿದ್ದರೂ, ಕೆಟ್ಟ ಸ್ವಭಾವವುಳ್ಳವನು ಒಳ್ಳೆಯವನಾಗುವುದಿಲ್ಲ. ಬಹಳ ಕಾಲ ಸಮುದ್ರದಲ್ಲಿ ಮುಳುಗಿದ್ದರೂ ಮೈನಾಕ ಪರ್ವತ ಮೆತ್ತಗಾಗಿಲ್ಲ**

## ಸಂಪಾದಕೀಯ

ಆತ್ಮೀಯ ಓದುಗರೆ,

ಶ್ರೀರಾಮ ಸೆಕೆಂಡರಿ ಸ್ಕೂಲ್ ಆಂಗ್ಲ ಮಾಧ್ಯಮದಲ್ಲಿ (9ರಿಂದ 12ನೇ ತರಗತಿಯವರೆಗೆ) ಬೋಧಿಸಲಾಗುವ ವಿಭಾಗವನ್ನು ಆರಂಭಿಸುವುದರೊಂದಿಗೆ ಶ್ರೀರಾಮ ವಿದ್ಯಾಕೇಂದ್ರದ ಶೈಕ್ಷಣಿಕ ಹಾದಿಯ ಮತ್ತೊಂದು ಮೈಲಿಗಲ್ಲು ಈ ವರ್ಷ ಸ್ಥಾಪನೆಯಾದಂತಾಗಿದೆ. ಸನ್ಮಾನ್ಯ ಶಿಕ್ಷಣ ಸಚಿವರು ಇದರ ಪ್ರಾರಂಭೋತ್ಸವದಲ್ಲಿ ಹಾಜರಿದ್ದುದು ವಿಶೇಷವಾಗಿತ್ತು.

2022–23ನೇ ಶೈಕ್ಷಣಿಕ ವರ್ಷಗಳಲ್ಲಿ ವಿದ್ಯಾಸಂಸ್ಥೆಗೆ ದಾಖಲಾಗಬೇಕಾದ ಎಲ್ಲಾ ವಿದ್ಯಾರ್ಥಿಗಳ ಪ್ರವೇಶಾತಿ ಪ್ರಕ್ರಿಯೆಯು ಸಾಮಾನ್ಯವಾಗಿ ಪೂರ್ಣಗೊಂಡಿದ್ದು ವಿದ್ಯಾರ್ಥಿಗಳ ಸಂಖ್ಯಾತ್ಮಕ ವಿವರಣೆಯನ್ನು ನೀಡಿದೆ. ವರ್ಷದಿಂದ ವರ್ಷಕ್ಕೆ ವಿದ್ಯಾರ್ಥಿಗಳ ಸಂಖ್ಯೆ ಗಣನೀಯ ಏರಿಕೆ ಕಂಡಿದ್ದು ಒಟ್ಟು 3500+ನ್ನು ದಾಟಿದೆ. ಇವೆಲ್ಲವುಗಳ ವರದಿಯೊಂದಿಗಿನ ಸರಯೂ ನಿಮ್ಮ ಕೈಯಲಿದೆ

ಸಂಪಾದಕ ಬಳಗ


## ಸಂಪಾದಕೀಯ ಮಂಡಳಿ

**ಸಂಪಾದಕರು, ಮುದ್ರಕರು ಹಾಗೂ ಪ್ರಕಾಶಕರು :**
ನಾರಾಯಣ ಸೋಮಯಾಜಿ
ಅಧ್ಯಕ್ಷರು, ಶ್ರೀರಾಮ ವಿದ್ಯಾಕೇಂದ್ರ
**ಕಾರ್ಯನಿರ್ವಾಹಕ ಸಂಪಾದಕರು :**
ಕೃಷ್ಣಪ್ರಸಾದ ಕಾಯರ್‌ಕಟ್ಟೆ
**ಸಹಸಂಪಾದಕರು :**
ಪ್ರೀತಿಕಾ (ಶಿಶುಮಂದಿರ)
ಚೈತ್ರ ಬಿ.ಕೆ (ಪ್ರಾಥಮಿಕ ಶಾಲೆ)
ರಾಜೇಶ್ವರಿ (ಪ್ರೌಢಶಾಲೆ)
ಶ್ವೇತಾ (ಸೆಕೆಂಡರಿ ಸ್ಕೂಲ್)
ಗೋವಿಂದ ನಾರಾಯಣ (ಪದವಿಪೂರ್ವ)
ಅಖಿಲಾ (ಪದವಿ)
**ವ್ಯವಸ್ಥಾಪಕ ಸಂಪಾದಕರು :** ಕುಶಾಲಪ್ಪ ಅಮ್ಟೂರು


## ಶ್ರೀರಾಮ ವಿದ್ಯಾಕೇಂದ್ರ

**2022–23ನೇ ಸಾಲಿನ ವಿಭಾಗವಾರು ವಿದ್ಯಾರ್ಥಿಗಳ ದಾಖಲಾತಿ ವಿವರ**

| ತರಗತಿ | ವಿಭಾಗ | ಬಾಲಕ | ಬಾಲಕಿ | ಒಟ್ಟು |
|---|---|---|---|---|
| **ಶಿಶುಮಂದಿರ** | | | | |
| ಶ್ರೀರಾಮ | 7 | 96 | 91 | 187 |
| ಶ್ರೀಗಣೇಶ್ | 1 | 5 | 5 | 10 |
| ಶ್ರೀಕೃಷ್ಣ | 1 | 13 | 10 | 23 |
| ಅಕ್ಕಮಹಾದೇವಿ | 1 | 11 | 14 | 25 |
| ಸರಸ್ವತಿ | 1 | 11 | 8 | 19 |
| ಒಟ್ಟು | | **136** | **128** | **264** |
| **ಪ್ರಾಥಮಿಕ ಶಾಲೆ** | | | | |
| 1 | 6 | 87 | 75 | 162 |
| 2 | 6 | 98 | 75 | 173 |
| 3 | 6 | 85 | 69 | 154 |
| 4 | 6 | 106 | 86 | 192 |
| 5 | 5 | 113 | 107 | 220 |
| 6 | 5 | 118 | 99 | 217 |
| 7 | 5 | 107 | 89 | 196 |
| ಒಟ್ಟು | 39 | **714** | **600** | **1314** |
| **ಪ್ರೌಢಶಾಲೆ** | | | | |
| 8 | 6 | 175 | 132 | 307 |
| 9 | 6 | 172 | 127 | 299 |
| 10 | 6 | 161 | 137 | 298 |
| | | **508** | **396** | **904** |
| **ಸೆಕೆಂಡರಿ ಸ್ಕೂಲ್** | | | | |
| 9 | | **32** | **23** | **55** |
| **ಪದವಿ ಪೂರ್ವ ವಿಭಾಗ** | | | | |
| ಪ್ರ. ವಿಜ್ಞಾನ | 3 | 76 | 100 | 176 |
| ಪ್ರ. ವಾಣಿಜ್ಯ | 3 | 145 | 100 | 245 |
| ಪ್ರ. ಕಲಾ | 1 | 14 | 16 | 30 |
| ದ್ವಿ. ವಿಜ್ಞಾನ | 2 | 50 | 50 | 100 |
| ದ್ವಿ. ವಾಣಿಜ್ಯ | 3 | 81 | 91 | 172 |
| ದ್ವಿ. ಕಲಾ | 1 | 13 | 18 | 31 |
| ಒಟ್ಟು | | **379** | **375** | **754** |
| **ಪದವಿ** | | | | |
| ಪ್ರ. ಬಿ.ಎ | 1 | 1 | 9 | 10 |
| ಪ್ರ. ಬಿ.ಕಾಂ | 1 | 13 | 14 | 27 |
| ಪ್ರ. ಬಿ.ಸಿ.ಎ | 1 | 27 | 35 | 62 |
| ದ್ವಿ. ಬಿ.ಎಸ್ಸಿ | 1 | 5 | 3 | 8 |
| ದ್ವಿ. ಬಿ.ಕಾಂ | 1 | 12 | 32 | 44 |
| ದ್ವಿ. ಬಿ.ಸಿ.ಎ | 1 | 9 | 13 | 22 |
| ತೃ. ಬಿ.ಎಸ್ಸಿ | 1 | 1 | 9 | 10 |
| ತೃ ಬಿ.ಕಾಂ | 1 | 25 | 40 | 65 |
| ತೃ ಬಿ.ಎ | 1 | 9 | 8 | 17 |
| ಒಟ್ಟು | | **102** | **163** | **265** |

**ಒಟ್ಟು ವಿದ್ಯಾರ್ಥಿಗಳು**
**3556**

**ಒಟ್ಟು ಬಾಲಕರು**
**1871**

**ಒಟ್ಟು ಬಾಲಕಿಯರು**
**1685**

**ಒಟ್ಟು ಸಿಬಂದಿಗಳು**
**241**

**ಬೋಧಕ ವರ್ಗ**
**151**

**ಬೋಧಕೇತರ ವರ್ಗ**
**65**

**ಚಾಲಕರು**
**25**

**ಶಿಶುಶಿಕ್ಷಣ ಉನ್ನತೀಕರಣ ಬೈಠಕ್ 3.7.22**

ಶಿಶುಶಿಕ್ಷಣದ ಉನ್ನತೀಕರಣಕ್ಕಾಗಿ ಶಿಶುಮಂದಿರದ ಹಿಂದಿನ ಹಾಗೂ ಈಗಿನ ಪಾಲಕರ ಬೈಠಕ್ ಆಯೋಜಿಸಲಾಗಿತ್ತು. ಡಾ। ಪ್ರಭಾಕರ್ ಭಟ್ ಕಲ್ಲಡ್ಕ, ಶ್ರೀ ನಾರಾಯಣ ಸೋಮಯಾಜಿ ಮತ್ತು ಶ್ರೀ ವಸಂತ ಮಾಧವ ಉಪಸ್ಥಿತರಿದ್ದರು. ಈಗ ಇರುವ ಶಿಕ್ಷಣ ವ್ಯವಸ್ಥೆಯಲ್ಲಿ ಸುಧಾರಿಸಬಹುದಾದ ಸಂಗತಿಗಳ ಬಗ್ಗೆ ಚರ್ಚೆ ನಡೆಯಿತು. ಬುನಾದಿ ಶಿಕ್ಷಣದ 12 ವಿಷಯಗಳ ಬಗ್ಗೆಯೂ ಚರ್ಚೆ ನಡೆಸಲಾಯಿತು. ಒಟ್ಟು 19ಜನ ಅಪೇಕ್ಷಿತರು ಉಪಸ್ಥಿತರಿದ್ದರು.

**ಮಾಹಿತಿ ಕಾರ್ಯಾಗಾರ 09.07.2022**

ಶಿಶುಮಂದಿರಕ್ಕೆ ಹೊಸದಾಗಿ ಸೇರ್ಪಡೆಯಾದ ಮಾತಾಜಿಗಳಿಗೆ ಜ್ಞಾನೇಂದ್ರೀಯ ಚಟುವಟಿಕೆಗಳನ್ನು ಅಭ್ಯಾಸ ಮಾಡಿಸಲಾಯಿತು. ಹಾಗೂ ಎಲ್ಲಾ ಮಾತಾಜಿ ಮತ್ತು ಸಹಾಯಕಿಯರ ಬೈಠಕ್ ನಡೆಯಿತು.

**ಪೂರ್ವ ಸಿದ್ಧತಾ ಬೈಠಕ್** 21–07–2022

ದುರ್ಗಾಪರಮೇಶ್ವರಿ ದೇವಸ್ಥಾನ ಮುಲಾರಿನಲ್ಲಿ ಶಿಶುಮಂದಿರದ ವತಿಯಿಂದ ನಡೆಯುವ ಸಾಮೂಹಿಕ ವರಮಹಾಲಕ್ಷ್ಮೀ ಪೂಜೆಯ ಪೂರ್ವ ತಯಾರಿ ಬೈಠಕ್ ನಡೆಸಲಾಯಿತು. ಒಟ್ಟು 16 ಮಂದಿ ಭಾಗವಹಿಸಿದ್ದರು.

**ಜಿಲ್ಲಾ ಪ್ರಶಿಕ್ಷಣ ವರ್ಗ 30.7.22**

ದಕ್ಷಿಣ ಕನ್ನಡ ಜಿಲ್ಲಾ ಶಿಶುಶಿಕ್ಷಣ ಶಿಕ್ಷಕಿಯರ ಪ್ರಶಿಕ್ಷಣ ವರ್ಗವು ನಡೆಯಿತು. ಕಾರ್ಯಕ್ರಮದಲ್ಲಿ ವಿದ್ಯಾಭಾರತಿಯ ನೈತಿಕ ಮತ್ತು ಆಧ್ಯಾತ್ಮಿಕ ಶಿಕ್ಷಣದ ಕ್ಷೇತ್ರೀಯ ಪ್ರಮುಖರಾದ ಶ್ರೀ ವೆಂಕಟರಮಣ ಮಂಕುಡೆ ಇವರು ಭಾಗವಹಿಸಿ, ಸರಸ್ವತಿ ವಂದನದ ಮೂಲಕ ಅವಧಿಗಳನ್ನು ಪ್ರಾರಂಭಿಸಲಾಯಿತು.

ಶಿಶುಮಂದಿರದ ಮಾತಾಜಿ ಭಗಿನಿ ಸ್ವಾತಿ ಇವರು ಶೈಕ್ಷಣಿಕ ವಿಷಯಗಳ ಬಗ್ಗೆ ವಿವರಿಸಿದರು. ಎರಡನೇ ಅವಧಿಯಲ್ಲಿ ಕಂಠಪಾಠ ಅಭ್ಯಾಸ ಮಾಡಲಾಯಿತು.

ಪುತ್ತೂರು ವಿವೇಕಾನಂದ ವಿದ್ಯಾವರ್ಧಕ ಸಂಘದ ಅಧ್ಯಕ್ಷರು ಡಾ। ಪ್ರಭಾಕರ್ ಭಟ್ ಕಲ್ಲಡ್ಕ, ರಾಷ್ಟ್ರ ಸೇವಿಕಾ ಸಮಿತಿಯ ಕರ್ನಾಟಕ ಪ್ರಾಂತೀಯ ಕಾರ್ಯಕಾರಿಣಿ ಸದಸ್ಯೆ ಶ್ರೀಮತಿ ಡಾ। ಕಮಲಾ ಪ್ರ. ಭಟ್ ಉಪಸ್ಥಿತರಿದ್ದರು. 39 ಮಾತಾಜಿಗಳು ಉಪಸ್ಥಿತರಿದ್ದರು.

**ಶ್ರೀ ಗಣೇಶ ಶಿಶುಮಂದಿರ ಬೊಂಡಾಲ 21.7.22**

ಗುರುಪೂರ್ಣಿಮೆ – ಗುರುಪೂಜೆಯ ನಿಮಿತ್ತ ಶ್ರೀಮತಿ ಉಮಾವತಿ ಇವರು ಮಕ್ಕಳಿಗೆ ಗುರು ಶಿಷ್ಯರ ಕಥೆಯನ್ನು ಹೇಳಿದರು. ಒಟ್ಟು 7 ಮಕ್ಕಳು ಉಪಸ್ಥಿತರಿದ್ದರು.

**ವಿದ್ಯಾರ್ಥಿಗಳೊಂದಿಗೆ ಸಂವಾದ 12.7.22**

ಪ್ರಾಥಮಿಕ ಶಾಲೆಯಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವ ಶ್ರೀರಾಮ ವಸತಿ ನಿಲಯದ ವಿದ್ಯಾರ್ಥಿಗಳಿಗೆ ಮುಖ್ಯಶಿಕ್ಷಕರಾದ ಶ್ರೀ ರವಿರಾಜ್ ಕಣಂತೂರು ಮಕ್ಕಳ ಕುಶಲೋಪರಿ ವಿಚಾರಿಸುತ್ತಾ ಆರೋಗ್ಯ, ಶಿಸ್ತು ಮತು ಶುಚಿತ್ವದ ಬಗ್ಗೆ ಮಾಹಿತಿ ನೀಡಿದರು.

**ಗುರುಪೂರ್ಣಿಮೆ : 14.7.2022**

ಗುರುಪೂಜಾ ಕಾರ್ಯಕ್ರಮದಲ್ಲಿ ಪ್ರೌಢಶಾಲೆಯ ನಿವೃತ್ತ ದೈಹಿಕ ಶಿಕ್ಷಣ ಶಿಕ್ಷಕರಾದ ಶ್ರೀ ರಾಧಾಕೃಷ್ಣ ಅಡ್ಯಂತಾಯ ವಿದ್ಯಾರ್ಥಿಗಳಿಗೆ ಗುರುಪೂರ್ಣಿಮೆಯ ಮಹತ್ವ ತಿಳಿಸಿಕೊಟ್ಟರು. ಕಾರ್ಯಕ್ರಮದಲ್ಲಿ 6ನೇ ತರಗತಿಯ ಆದಿತ್ಯ ಅರ್ಥ ಸಹಿತ ಶ್ಲೋಕ, ಧಾತ್ರಿ ಪ್ರೇರಣಾ ಗೀತೆ ಹಾಡಿದಳು ಹಾಗೂ 7ನೇ ತರಗತಿಯ ಶ್ರೀವತ್ಸ ಅಮೃತವಚನ ಹೇಳಿದನು.

**ಜಿಲ್ಲಾಮಟ್ಟದ ಈಜುಸ್ಪರ್ಧೆ : 15.7.2022**

ದಕ್ಷಿಣ ಕನ್ನಡ ಜಿಲ್ಲಾ ಪಂಚಾಯತ್, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ದ.ಕ ಜಿಲ್ಲೆ, ಮಂಗಳೂರು ಇದರ ಪ್ರಾಯೋಜಕತ್ವದಲ್ಲಿ ನಡೆದ ಜಿಲ್ಲಾ ಮಟ್ಟದ ಆಟೋಟ ಸ್ಪರ್ಧೆಯಲ್ಲಿ 7ನೇ ತರಗತಿಯ ಅನರ್ಘ್ಯ 100 ಮೀ ಹಾಗೂ 50 ಮೀ. ಬ್ಯಾಕ್‌ಬೋನ್ ಈಜು ಸ್ಪರ್ಧೆಯಲ್ಲಿ ತೃತೀಯ ಸ್ಥಾನ ಪಡೆದು ಕಂಚಿನ ಪದಕ ಹಾಗೂ ಪ್ರಮಾಣಪತ್ರವನ್ನು ಪಡೆದಿರುತ್ತಾರೆ.

**ಕವಿಗೋಷ್ಠಿಯಲ್ಲಿ ಭಾಗಿ : 17.7.2022**

ಚಿಗುರೆಲೆ ಸಾಹಿತ್ಯ ಬಳಗ ಪುತ್ತೂರು ಇವರು ಆಯೋಜಿಸಿದ 'ಮುಂಗಾರು ಕವಿಗೋಷ್ಠಿ ಮತ್ತು ಚಿದಾನಂದ ಕಾಮತ್ ಸಂಸ್ಮರಣೆ 2022'ರ ಪ್ರಯುಕ್ತ ನಡೆದ ಕವಿಗೋಷ್ಠಿಯಲ್ಲಿ ಶ್ರೀರಾಮ ಪ್ರಾಥಮಿಕ ವಿಭಾಗದ ಅಧ್ಯಾಪಕರಾದ ಕು. ಲಿಖಿತ ಕೋಟ್ಯಾನ್ ಭಾಗವಹಿಸಿ ತಾವು ಸ್ವರಚಿತ ಕವನ ವಾಚನ ಮಾಡಿದರು

**ತಾಲೂಕು ಮಟ್ಟಕ್ಕೆ ಆಯ್ಕೆ : 19.7.2022**

ಕಲ್ಲಡ್ಕ ವಲಯ ಮಟ್ಟದ ಚೆಸ್ ಸ್ಪರ್ಧೆಯಲ್ಲಿ 7ನೇ ತರಗತಿ ಅಂಕಿತಾ ಬಿ ಪ್ರಥಮ ಸ್ಥಾನ ಮತ್ತು ಅರವಿಂದ ತೃತೀಯ ಸ್ಥಾನ ಪಡೆದು ತಾಲೂಕು ಮಟ್ಟಕ್ಕೆ ಆಯ್ಕೆಯಾಗಿದ್ದಾರೆ.

**ವಿದ್ಯಾರ್ಥಿಗಳ ಚಿತ್ತ ವೃಕ್ಷಗಳತ್ತ : 20.7.2022**

ವಿಜ್ಞಾನ ಸಂಘದ ವತಿಯಿಂದ "ವಿದ್ಯಾರ್ಥಿಗಳ ಚಿತ್ತ ವೃಕ್ಷಗಳತ್ತ" ಎಂಬ ಕಾರ್ಯಕ್ರಮವನ್ನು ಬಂಟ್ವಾಳ ಅರಣ್ಯ ಇಲಾಖೆಯ ಸಹಕಾರದೊಂದಿಗೆ ನಡೆಯಿತು. ಕಾರ್ಯಕ್ರಮದ ಅಂಗವಾಗಿ ವಿದ್ಯಾರ್ಥಿಗಳಿಗೆ ರಕ್ತಚಂದನ, ಸಾಗುವಾನಿ, ಮಹಾಗನಿ, ರಾಮಪತ್ರೆ, ಹೆಬ್ಬಲಸು, ಸೀತಾಫಲ, ಪೇರಳೆ, ಬೇವು, ಬಿಲ್ವ, ನೆಲ್ಲಿ ಮುಂತಾದ ಗಿಡಗಳನ್ನು ವಿತರಿಸಲಾಯಿತು.

**ಶಾಲಾ ಸಂಸತ್ತು ಅಧಿವೇಶನ : 20.7.2022**

2022–23ನೇ ಸಾಲಿನ ಶಾಲಾ ಸಂಸತ್ತಿನ ಮೊದಲ ಅಧಿವೇಶನ ನಡೆಯಿತು. ಆಡಳಿತ ಪಕ್ಷದವರು ತಮ್ಮ ಕಾರ್ಯವೈಖರಿಯನ್ನು ವಿವರಿಸಿದರೆ, ವಿರೋಧ ಪಕ್ಷದವರು ಆಡಳಿತ ಪಕ್ಷದವರ ತಪ್ಪುಗಳನ್ನು ಟೀಕಿಸಿದರು. ಎರಡೂ ಪಕ್ಷದವರು ತಮ್ಮ ತಮ್ಮ ವಾದಗಳನ್ನು ಮಂಡಿಸಿದರು. ಸಭಾಪತಿಗಳಾದ 7ನೇ ತರಗತಿಯ ಶ್ರೀವತ್ಸ ಈ ಸಂಸತ್ತು ಅಧಿವೇಶನವನ್ನು ಮುಂದಿನ ತಿಂಗಳಿಗೆ ಮುಂದೂಡಿದರು.

**ವಿಜ್ಞಾನ ಮೇಳ : 21.7.2022**

ಶಾಲಾ ಮಟ್ಟದ ಜ್ಞಾನ ವಿಜ್ಞಾನ ಮೇಳದಲ್ಲಿ ವಿಜ್ಞಾನ ಮಾದರಿ ಪ್ರದರ್ಶನ, ವಿಜ್ಞಾನ ಪ್ರಯೋಗ, ವೇದಗಣಿತ ರಸಪ್ರಶ್ನೆ, ಗಣಿತ ಪ್ರಯೋಗ, ವಿಜ್ಞಾನ ರಸಪ್ರಶ್ನೆ ಇತ್ಯಾದಿ ಸ್ಪರ್ಧೆಗಳನ್ನು ನಡೆಸಲಾಯಿತು.

**ಸಾಮೂಹಿಕ ಹುಟ್ಟುಹಬ್ಬ : 22.7.2022**

ಮೇ, ಜೂನ್, ಜುಲೈ ತಿಂಗಳಲ್ಲಿ ಹುಟ್ಟಿದ ಮಕ್ಕಳ ಸಾಮೂಹಿಕ ಹುಟ್ಟುಹಬ್ಬವನ್ನು ಆಚರಿಸಲಾಯಿತು. ಮುಖ್ಯೋಪಾಧ್ಯಾಯರಾದ ಶ್ರೀ ರವಿರಾಜ್ ಕಣಂತೂರುರವರು ಹುಟ್ಟುಹಬ್ಬದ ಮಹತ್ವನ್ನು ಕಥೆಯ ಮೂಲಕ ವಿವರಿಸಿದರು. ವೇದಿಕೆಯಲ್ಲಿ ಪೋಷಕರಾದ ಶಶಿಕಿರಣ್ ಉಪಸ್ಥಿತರಿದ್ದರು.

**ಜಿಲ್ಲಾಮಟ್ಟದ ಚೆಸ್ ಸ್ಪರ್ಧೆ : 22.7.2022**

ವಿದ್ಯಾಭಾರತಿ ದ.ಕ ಜಿಲ್ಲಾ ಮಟ್ಟದ ಬಾಲವರ್ಗ ವಿಭಾಗದ ಚೆಸ್ ಸ್ಪರ್ಧೆಯಲ್ಲಿ 7ನೇ ತರಗತಿಯ ಶ್ರೀವತ್ಸ, ಚಿರಾಗ್, ಅರವಿಂದ, 6ನೇ ತರಗತಿಯ ವಿಜಿತ್ ಬಿ ಮತ್ತು ಆದಿತ್ಯ ದ್ವಿತೀಯ ಸ್ಥಾನ ಪಡೆದುಕೊಂಡರು.

**ಬಾಲಗಂಗಾಧರ ತಿಲಕರ ಜಯಂತಿ : 23.7.22**

ಲೋಕಮಾನ್ಯ ಬಾಲಗಂಗಾಧರ ತಿಲಕರ ಜನ್ಮದಿನಾಚರಣೆಯಲ್ಲಿ ಶ್ರೀರಾಮ ಪದವಿಪೂರ್ವ ವಿಭಾಗದ ಇತಿಹಾಸ ಉಪನ್ಯಾಸಕರಾದ ಶ್ರೀ ರಮೇಶ್‌ರವರು ತಿಲಕರ ಬಾಲ್ಯ, ತಿಲಕರು ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಕ್ಷಣಗಳು, ಅವರು ತಂದ ಸಾಮಾಜಿಕ ಹಾಗೂ ಧಾರ್ಮಿಕ ಸುಧಾರಣೆ, ರಾಷ್ಟ್ರೀಯ ಶಿಕ್ಷಣ ನೀತಿಯ ಕುರಿತಾಗಿ ಬಾಲಗಂಗಾಧರ ತಿಲಕರ ಚಿಂತನೆಯನ್ನು ತಮ್ಮ ಗಾಯನದೊಂದಿಗೆ ತಿಳಿಸಿಕೊಟ್ಟರು.

**ಸುಜ್ಞಾನ ಗ್ರಂಥಾಲಯ ಉದ್ಘಾಟನೆ: 23.7.2022**

'ಸುಜ್ಞಾನ – ಓದುವ ಮೂಲೆ' ಗ್ರಂಥಾಲಯವನ್ನು ಮೈಸೂರು ಹಾಗೂ ಬೆಂಗಳೂರು ಶಿಕ್ಷಣ ಸಂಸ್ಥೆಯ ಪ್ರಯೋಗಾಲಯದಲ್ಲಿ ಸಹಾಯಕಿಯಾಗಿ ಕಾರ್ಯನಿರ್ವಹಿಸಿ ನಿವೃತ್ತಿಗೊಂಡಿರುವ ಮಾಲತಿ ಹಾಗೂ ಅವರ ಸಹೋದರಿ ಕಾಮಿನಿಯವರು ದೀಪ ಬೆಳಗಿಸುವುದರ ಮೂಲಕ ಉದ್ಘಾಟಿಸಿದರು.

**ಭಜನೆ–ಸಾಮೂಹಿಕ ಹುಟ್ಟುಹಬ್ಬ : 23.7.2022**

7ನೇ ತರಗತಿಯ ವಿದ್ಯಾರ್ಥಿಗಳಿಂದ ಭಜನಾ ಕಾರ್ಯಕ್ರಮ ಹಾಗೂ ಮೇ, ಜೂನ್ ಹಾಗೂ ಜುಲೈ ತಿಂಗಳಲ್ಲಿ ಹುಟ್ಟಿದ ಮಕ್ಕಳ ಹುಟ್ಟುಹಬ್ಬವನ್ನು ಸಾಮೂಹಿಕವಾಗಿ ಆಚರಿಸಲಾಯಿತು.

**ಪ್ರತಿಜ್ಞಾ ವಿಧಿ ಸ್ವೀಕಾರ : 25.7.2022**

ಪುತ್ತೂರು ವಿವೇಕಾನಂದ ಕಾಲೇಜಿನಲ್ಲಿ ನಡೆದ ಪ್ರತಿಜ್ಞಾ ವಿಧಿ ಸ್ವೀಕಾರ ಕಾರ್ಯಕ್ರಮದಲ್ಲಿ ಪ್ರಾಥಮಿಕ ವಿಭಾಗಕ್ಕೆ ಹೊಸದಾಗಿ ಸೇರಿದ ಅಧ್ಯಾಪಕರು ಭಾಗವಹಿಸಿದರು.

**ಕಾರ್ಗಿಲ್ ಸಂಸ್ಮರಣೆ : 26.7.2022**

'ಕಾರ್ಗಿಲ್ ವಿಜಯೋತ್ಸವ ದಿನ'ವನ್ನು ನಿವೃತ್ತ ಸೈನಿಕರೊಂದಿಗೆ ಆಚರಿಸಲಾಯಿತು. ವಿವೇಕಾನಂದ ವಿದ್ಯಾವರ್ಧಕ ಸಂಘದ ಅಧ್ಯಕ್ಷರಾದ ಶ್ರೀಯುತ ಡಾ। ಪ್ರಭಾಕರ್ ಭಟ್ ಕಲ್ಲಡ್ಕ ಕಾರ್ಗಿಲ್ ಯುದ್ಧದ ಸಂದರ್ಭವನ್ನು ವಿವರಿಸುತ್ತಾ, ಮುಂದಿನ ದಿನದಲ್ಲಿ ಅಗ್ನಿಪಥಕ್ಕೆ ಸೇರಿ ದೇಶ ಸೇವೆಗೆ ಮುನ್ನುಡಿಯಿಡಿ ಎಂದು ತಮ್ಮ ಅಧ್ಯಕ್ಷೀಯ ನುಡಿಗಳಲ್ಲಿ ಹೇಳಿದರು.

ನಂತರ ಎಲ್ಲಾ ನಿವೃತ್ತ ಯೋಧರು ತಮ್ಮ ತಮ್ಮ ಅನುಭವಗಳನ್ನು ಹಂಚಿಕೊಂಡರು.

ಯೋಧರಿಗೆ ಶ್ರೀರಾಮ ವಿದ್ಯಾಸಂಸ್ಥೆ ಸಂಸ್ಥಾಪಕರಾದ ಕಲ್ಲಡ್ಕ ಡಾ। ಪ್ರಭಾಕರ್ ಭಟ್‌ರವರು ಶಾಲು ಹೊದಿಸಿ ಸ್ಮರಣಿಕೆಯನ್ನಿತ್ತು ಗೌರವಿಸಲಾಯಿತು. ಹಾಗೂ ಅವರ ಧರ್ಮಪತ್ನಿಯರಿಗೆ ಡಾ। ಕಮಲಾ ಪ್ರಭಾಕರ್ ಭಟ್‌ರವರು ಅರಶಿನ ಕುಂಕುಮ ಇಟ್ಟು ಮಡಿಲು ತುಂಬಿಸಿ ಗೌರವಿಸಿದರು.

ವೇದಿಕೆಯಲ್ಲಿ ಸೈನಿಕರಾಗಿ ಸೇವೆ ಸಲ್ಲಿಸಿ ನಿವೃತ್ತರಾಗಿರುವ ಕಾರ್ಗಿಲ್ ಯುದ್ಧದಲ್ಲಿ ಭಾಗವಹಿಸಿ ಆಪರೇಷನ್ ವಿಜಯ ಪದಕ ಪಡೆದಿರುವ ವಿಟ್ಲದ ಬಾಲಕೃಷ್ಣ ಗೌಡ ಹಾಗೂ ಅವರ ಪತ್ನಿ ಜಲಜಾಕ್ಷಿ, ಜಮ್ಮು ಕಾಶ್ಮೀರ, ಅಸ್ಸಾಂ ಹಾಗೂ ಪಂಜಾಬ್‌ಯಲ್ಲಿ ಸೇವೆ ಸಲ್ಲಿಸಿದ ತುಂಬೆಯ ಜಗದೀಶ ಕುಮಾರ್ ಟಿ ಮತ್ತು ಶೋಭಾ ದಂಪತಿಗಳು, ಸೇನಾವಧಿಯಲ್ಲಿ ನಾಯಕ್ ಪದವಿಯನ್ನು ಪಡೆದಿರುವ ತೆಕ್ಕಿಪಾಪುವಿನ ಚಂದ್ರಶೇಖರ್ ಹಾಗೂ ಗಾಯತ್ರಿ ದಂಪತಿಗಳು, ಭಯೋತ್ಪಾದಕ, ಆಪರೇಷನ್ ಮೇಘದೂತ ಹಾಗೂ ಪ್ಯಾರಚೂಟ್ ರೆಜಿಮೆಂಟ್‌ನಲ್ಲಿ ಪ್ಯಾರಾ ಕಮಾಂಡೋ ಆಗಿ ಸೇವೆ ಸಲ್ಲಿಸಿ ನಿವೃತ್ತರಾಗಿರುವ ದಯಾನಂದ ನಾಯಕ್, ಮದ್ರಾಸ್ ರೆಜಿಮೆಂಟ್‌ನಲ್ಲಿ ಸೇವೆಸಲ್ಲಿಸಿ ನಿವೃತ್ತರಾಗಿರುವ ನಾವೂರಿನ ಹರೀಶ ಎಂ ಮತ್ತು ಶ್ವೇತಾ ದಂಪತಿಗಳು, ಸೇನೆಯಲ್ಲಿ ಇಲೆಕ್ಟ್ರಾನಿಕ್ ಮೆಕಾನಿಕಲ್ ಇಂಜಿನಿಯರ್ ವಿಭಾಗದಲ್ಲಿ ಅಲ್ಲಿಪಾದೆಯ ಜಯಪ್ರಕಾಶ, ಪುಚ್ಚೆಕೆರೆಯ ಗಣೇಶ್ ಕಾಮತ್, ಕರ್ನಾಟಕ ದಕ್ಷಿಣ ಪ್ರಾಂತ ಕಾರ್ಯಕಾರಿಣಿ ಸದಸ್ಯರಾದ ಶ್ರೀಮತಿ ಡಾ। ಕಮಲಾ ಪ್ರಭಾಕರ್ ಭಟ್, ಶ್ರೀರಾಮ ವಿದ್ಯಾಕೇಂದ್ರದ ಸಂಚಾಲಕರಾದ ಶ್ರೀ ವಸಂತ ಮಾಧವ, ಸಹಸಂಚಾಲಕರಾದ ಶ್ರೀ ರಮೇಶ್ ಎನ್, ಆಡಳಿತ ಮಂಡಳಿ ಸದಸ್ಯರಾದ ಶ್ರೀಮತಿ ಮಲ್ಲಿಕಾ ಶೆಟ್ಟಿ ಮತ್ತು ಶ್ರೀಮತಿ ಲಕ್ಷ್ಮೀ ರಘುರಾಜ್ ಹಾಗೂ ವಿಭಾಗ ಮುಖ್ಯಸ್ಥರು ಉಪಸ್ಥಿತರಿದ್ದರು.

**ಅವಲೋಕನ ಬೈಠಕ್ : 27.7.2022**

ಮುಖ್ಯೋಪಾಧ್ಯಾಯರಾದ ಶ್ರೀ ರವಿರಾಜ್ ಮಾರ್ಗದರ್ಶನದಲ್ಲಿ ತಿಂಗಳ ಕಾರ್‍ಯಕ್ರಮ ಅವಲೋಕನ ಬೈಠಕ್ ನಡೆಯಿತು.

**ಆಟಿ ಅಮಾವಾಸ್ಯೆ ಆಚರಣೆ : 28.7.2022**

ಆಟಿ ಅಮಾವಾಸ್ಯೆಯ ಪ್ರಯುಕ್ತ ವಿಶೇಷ ಆಚರಣೆ ಹಾಗೂ ಮಾಹಿತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಅಧ್ಯಾಪಕರಾದ ಶ್ರೀ ಸುಮಂತ್ ಆಳ್ವ ಎಂ ರವರು ಆಟಿ ಅಮಾವಾಸ್ಯೆಯ ಮಹತ್ವ ತಿಳಿಸಿದರು. ಕಾರ್ಯಕ್ರಮದಲ್ಲಿ ಹಿರಿಯ ಅಧ್ಯಾಪಕರಾದ ದೇವಿಕಾರವರು ಹಾಲೆಮರದ ತೊಗಟೆಯಿಂದ ಕಷಾಯ ತಯಾರಿಕೆಯ ಬಗ್ಗೆ ಪ್ರಾತ್ಯಕ್ಷಿಕೆ ಮೂಲಕ ತೋರಿಸಿಕೊಟ್ಟರು. ಕಾರ್ಯಕ್ರಮದ ಕೊನೆಯಲ್ಲಿ ವಿದ್ಯಾರ್ಥಿಗಳಿಗೆ ಶಾಲಾ ಬಸ್ ಚಾಲಕರಿಗೆ ಹಾಗೂ ನಿರ್ವಾಹಕರಿಗೆ ಕಷಾಯ ವಿತರಣೆಯೊಂದಿಗೆ ಮೆಂತೆಗಂಜಿಯನ್ನು ನೀಡಲಾಯಿತು.

**ವಿವಿಧ ಸ್ಪರ್ಧೆ : 29.7.2022**

ಅಜಾದಿ ಕಾ ಅಮೃತ ಮಹೋತ್ಸವದ ಅಂಗವಾಗಿ ವಿದ್ಯಾರ್ಥಿಗಳಲ್ಲಿ ರಾಷ್ಟ್ರೀಯತೆ, ರಾಷ್ಟ್ರಪ್ರೇಮದ ಭಾವನೆಗಳನ್ನು ಜಾಗೃತಗೊಳಿಸಲು ಗೀತೆಗಾಯನ ಸ್ಪರ್ಧೆ, ಭಾಷಣ ಸ್ಪರ್ಧೆ ಹಾಗೂ ಪ್ರಬಂಧ ಸ್ಪರ್ಧೆ ಆಯೋಜಿಸಲಾಯಿತು.

## ಪ್ರೌಢಶಾಲೆ

**ರಸಪ್ರಶ್ನೆ ಕಾರ್ಯಕ್ರಮ**

ರಾಷ್ಟ್ರಪತಿ ಮತ್ತು ಉಪರಾಷ್ಟ್ರಪತಿ ಚುನಾವಣಾ ಪ್ರಯುಕ್ತ ವಿದ್ಯಾರ್ಥಿಗಳಲ್ಲಿ ಅರಿವು ಮೂಡಿಸಲು ದಿನಾಂಕ 15/07/2022ರಂದು ರಸಪ್ರಶ್ನೆ ಕಾರ್ಯಕ್ರಮವನ್ನು ನಡೆಸಲಾಯಿತು. ಈ ರಸಪ್ರಶ್ನೆ ಕಾರ್ಯಕ್ರಮವನ್ನು ಮೇಘಶ್ರೀ ಮಾತಾಜಿ ಮತ್ತು ಅನ್ವಿತ ಮಾತಾಜಿ ನಡೆಸಿಕೊಟ್ಟರು.

**ವಿದ್ಯಾರ್ಥಿಗಳ ಆಧಾರ್‌ಕಾರ್ಡ್ ಅಪ್‌ಡೇಟ್ 26/07/2022– 31/07/2022**

ಪ್ರೌಢಶಾಲೆ ಕಲ್ಲಡ್ಕ ಇಲ್ಲಿನ ಎಲ್ಲಾ ವಿದ್ಯಾರ್ಥಿಗಳ ಆಧಾರ್‌ಕಾರ್ಡ್ ಅಪ್‌ಡೇಟ್ ಸಂಸ್ಥೆಯ ವತಿಯಿಂದ ಮಾಡಿಕೊಡಲಾಯಿತು.

**ಆಟಿ ಅಮವಾಸ್ಯೆಯ ಪರಿಚಯ 28/07/2022**

ಸರಸ್ವತಿ ವಂದನೆಯ ಸಭೆಯಲ್ಲಿ ಶಾಲೆಯ ಹಿರಿಯ ಶಿಕ್ಷಕರಾದ ಜಿನ್ನಪ್ಪ ಶ್ರೀಮಾನ್ ಇವರು ಆಟಿ ಅಮವಾಸ್ಯೆಯ ವಿಶೇಷತೆಗಳನ್ನು, ಹಾಲೆ ಮರದ ಕಷಾಯ ಕುಡಿದು ಆರೋಗ್ಯದ ಶರೀರವನ್ನಾಗಿಸಿಕೊಳುವ ಹಾಗೂ ಹಿರಿಯರ ಸಂಪ್ರದಾಯ ಆಚರಣೆಗಳ ಬಗ್ಗೆ ಮಕ್ಕಳಿಗೆ ತಿಳಿಸಿಕೊಟ್ಟರು.

**ಮಕ್ಕಳಿಗೆ ಬಾಳೆಹಣ್ಣು ವಿತರಣೆ 28/07/2022**

8ನೇ ತರಗತಿ ವಿದ್ಯಾರ್ಥಿಗಳಿಗೆ ವಿದ್ಯಾ–ಕೇಂದ್ರದ ಸಹಸಂಚಾಲಕರಾದ ಶ್ರೀ ರಮೇಶ್ ಶ್ರೀಮಾನ್ ಹಾಗೂ ಮುಖ್ಯೋಪಾಧ್ಯಾಯರಾದ ಶ್ರೀಮತಿ ಶಾಂಭವಿ ಮಾತಾಜಿ ವಿದ್ಯಾರ್ಥಿಗಳಿಗೆ ಬಾಳೆಹಣ್ಣನ್ನು ವಿತರಿಸಿದರು.

**ಅಧ್ಯಾಪಕರ ಬೈಠಕ್ 06/07/2022**

ಅಧ್ಯಾಪಕರ ಬೈಠಕ್‌ನಲ್ಲಿ ಸಂಚಾಲಕರಾದ ಶ್ರೀ. ವಸಂತ ಮಾಧವ ಮಾರ್ಗದರ್ಶನ ಮಾಡಿದರು. ಪ್ರಾಚಾರ್ಯರಾದ ಶ್ರೀ ವಸಂತ ಬಳ್ಳಾಲ್, ಉಪಪ್ರಾಂಶುಪಾಲರಾದ ಶ್ರೀ ತಿರುಮಲೇಶ್ವರ ಪ್ರಶಾಂತ್, ಶಿಕ್ಷಕ ಸಿಬ್ಬಂದಿಗಳು ಉಪಸ್ಥಿತರಿದ್ದರು.

**ಆಜಾದ್ ಕೀ ಅಮೃತ್ ಮಹೋತ್ಸವ 15.07.22**

ಆಜಾದ್ ಕೀ ಅಮೃತ್ ಮಹೋತ್ಸವದ ಆಚಾರಣೆಯನ್ನು ವಿದ್ಯಾರ್ಥಿಗಳು ನಡೆಸಿದರು. ಮುಖ್ಯಸ್ಥರಾದ ಶ್ರೀ ತಿರುಮಲೇಶ್ವರ ಪ್ರಶಾಂತ್, ಶಿಕ್ಷಕ ಸಿಬ್ಬಂದಿಗಳು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದರು.

**ಆರೋಗ್ಯ ತಪಸಣಾ ಶಿಬಿರ 21/07/2022**

ಬಾಳ್ತಿಲ ಪ್ರಾಥಮಿಕ ಆರೋಗ್ಯ ಕೇಂದ್ರದಿಂದ ಶ್ರೀರಾಮ ಸೆಕೆಂಡರಿ ಸ್ಕೂಲ್‌ನಲ್ಲಿ ಆರೋಗ್ಯ ತಪಾಸಣಾ ಶಿಬಿರವು ನಡೆಯಿತು.

**ಉಚಿತ ಪಠ್ಯ ಪುಸ್ತಕದ ವಿತರಣೆ 24.7.22**

ವಿದ್ಯಾಕೇಂದ್ರ ಸಂಚಾಲಕರು ಶ್ರೀ ವಸಂತ ಮಾಧವ ವಿದ್ಯಾರ್ಥಿ–ವಿದ್ಯಾರ್ಥಿನಿಯರಿಗೆ ಉಚಿತ ಪಠ್ಯ ಪುಸ್ತಕದ ವಿತರಣೆಯನ್ನು ಮಾಡಿದರು.

**ಕಾರ್ಗಿಲ್ ವಿಜಯ ದಿವಸ 26–07–2022**

ಖ್ಯಾತ ನ್ಯಾಯವಾದಿಗಳಾದ ಶ್ರೀಯುತ ಪ್ರಸಾದ್ ಕುಮಾರ್ ರೈ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡಿದರು. ಇದೇ ಸಂದರ್ಭದಲ್ಲಿ ತಾಲೂಕು ಮಟ್ಟದ ಚೆಸ್ ಸ್ಪರ್ಧೆಯಲ್ಲಿ ದ್ವಿತೀಯ ಸ್ಥಾನವನ್ನು ಪಡೆದ ವಿದ್ಯಾರ್ಥಿನಿ ವಾಸವಿ ಕೆ.ಸಿ ಯನ್ನು ಗೌರವಿಸಲಾಯಿತು.

## ಪದವಿಪೂರ್ವ

**ಮಾಸಿಕ ಬೈಠಕ್ 06/07/2022**

ಉಪನ್ಯಾಸಕರ ಮಾಸಿಕ ಬೈಠಕ್‌ನಲ್ಲಿ ಉಪನ್ಯಾಸಕರ ಪರಿಚಯ ಫಲಿತಾಂಶದ ಅವಲೋಕನ, ದಾಖಲಾತಿ, ಪಾಠ ಯೋಜನೆ, ಜೂನ್ ತಿಂಗಳಲ್ಲಿ ನಡೆದ ಕಾರ್ಯಕ್ರಮದ ಅವಲೋಕನ, ಜುಲೈ ತಿಂಗಳಲ್ಲಿ ನಡೆಯುವ ಕಾರ್ಯಕ್ರಮದ ಯೋಜನೆ ಇತ್ಯಾದಿಗಳ ಬಗ್ಗೆ ಚರ್ಚಿಸಲಾಯಿತು. ವಿದ್ಯಾಕೇಂದ್ರದ ಕೋಶಾಧಿಕಾರಿಯಾದ ಶ್ರೀ ಸತೀಶ್ ಭಟ್ ಶಿವಗಿರಿ, ಆಡಳಿತ ಮಂಡಳಿಯ ಸದಸ್ಯರು ಮತ್ತು ಪ ಪೂ. ವಿಭಾಗದ ಪ್ರತಿನಿಧಿಯಾದ ಶ್ರೀ ನಾಗೇಶ್ ಕಲ್ಕಡ್ಕ ಇವರುಗಳು ಉಪಸ್ಥಿತರಿದ್ದರು.

**ಭಗವದ್ಗೀತಾ ಅಭ್ಯಾಸ 07/07/2022**

ಒಂದು ವಾರಗಳ ಭಗವದ್ಗೀತಾ ಅಭ್ಯಾಸವು ಭಾರವಿ ಸಂಸ್ಕೃತ ಸಂಘದ ವತಿಯಿಂದ ಸಂಸ್ಕೃತ ಉಪನ್ಯಾಸಕರಾದ ಶ್ರೀ ಮಹೇಂದ್ರ ಮಂಜುನಾಥ್ ಭಟ್ ಇವರ ನೇತೃತ್ವದಲ್ಲಿ ಆರಂಭಿಸಲಾಯಿತು.

**ಪ್ರಾಥಮಿಕ ವಿಭಾಗಕ್ಕೆ ಭೇಟಿ 08/07/2022**

ಪ. ಪೂ. ವಿಭಾಗದ ಉಪನ್ಯಾಸಕರು ಪ್ರಾಥಮಿಕ ವಿಭಾಗಕ್ಕೆ ಭೇಟಿ ನೀಡಿದರು. ಪ್ರಾಥಮಿಕ ವಿಭಾಗದ ಮುಖ್ಯಸ್ಥರಾದ ಶ್ರೀ ರವಿರಾಜ್ ಶ್ರೀಮಾನ್ ಇವರು ಪ್ರಾಥಮಿಕ ಶಾಲೆ ಬೆಳೆದು ಬಂದ ಬಗೆ, ಕಾರ್ಯ ಚಟುವಟಿಕೆಗಳ ಬಗ್ಗೆ ಮಾಹಿತಿ ನೀಡಿದರು

**ಅಟಲ್ ಟಿಂಕರಿಂಗ್ ಲ್ಯಾಬ್‌ಗೆ ಭೇಟಿ 08.07.22**

ಪ. ಪೂ. ವಿಭಾಗದ ಉಪನ್ಯಾಸಕರು ಅಟಲ್ ಟಿಂಕರಿಂಗ್ ಲ್ಯಾಬ್‌ಗೆ ಭೇಟಿ ನೀಡಿದರು. ಶ್ರೀಮತಿ ರೋಹಿಣಿ ಮಾತಾಜಿ ಲ್ಯಾಬ್‌ನ ಕಾರ್ಯವೈಖರಿ ಬಗ್ಗೆ ಮಾಹಿತಿ ನೀಡಿದರು.

**ಮತದಾನ 11/07/22**

ಪ. ಪೂ ವಿಭಾಗದಲ್ಲಿ ವಿದ್ಯಾರ್ಥಿಗಳಲ್ಲಿ ಮತದಾನ ಜಾಗೃತಿಯನ್ನು ಮೂಡಿಸುವ ದೃಷ್ಟಿಯಿಂದ ಅಧ್ಯಕ್ಷ, ಕಾರ್ಯದರ್ಶಿ ಮತ್ತು ಸಹ ಕಾರ್ಯದರ್ಶಿ ಹುದ್ದೆಗಳಿಗೆ ಚುನಾವಣೆ ನಡೆಯಿತು. ಚುನಾವಣಾಧಿಕಾರಿಯಾಗಿ ಗಣಕ ಉಪನ್ಯಾಸಕಿ ಶ್ರೀಮತಿ ಸ್ವಾತಿ ಮಾತಾಜಿ ಕಾರ್ಯ ನಿರ್ವಹಿಸಿದರು.

**ಗುರು ಪೂರ್ಣಿಮಾ 13/07/22**

ವಿದ್ಯಾಭಾರತಿ ದಕ್ಷಿಣ ಕನ್ನಡ ಜಿಲ್ಲಾ ಅಧ್ಯಕ್ಷರು, ನಿವೃತ್ತ ಮುಖ್ಯಗುರುಗಳಾದ ಶ್ರೀ ಲೋಕಯ್ಯ ಡಿ. ಇವರು ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡಿದರು. ಶ್ರೀ ಕರುಣಾಕರ ಶ್ರೀಮಾನ್ ಉಪಸ್ಥಿತರಿದ್ದರು.

**ಸಾಮೂಹಿಕ ಹುಟ್ಟುಹಬ್ಬ–ಭಜನೆ 15.07.22**

ಹುಟ್ಟುಹಬ್ಬ ಆಚರಿಸಿಕೊಳ್ಳುತ್ತಿರುವ ವಿದ್ಯಾರ್ಥಿಗಳು ಪುಷ್ಪಾರ್ಚನೆ ಮತ್ತು ನಿಧಿ ಸಮರ್ಪಣೆ ಮಾಡಿದರು. ಮಾತಾಜಿಗಳು ತಿಲಕ ಧಾರಣೆ ಮಾಡಿ ಆರತಿ ಬೆಳಗಿ ಹರಸಿದರು.

**ಕಾರ್ಯಾಗಾರ 22/07/22**

ಅಡ್ಯಾರಿನ ಸಹ್ಯಾದ್ರಿ ಇಂಜಿನಿಯರಿಂಗ್ ಕಾಲೇಜುನಲ್ಲಿ ನಡೆದ ಅಟಲ್ ಟಿಂಕರಿಂಗ್ ಲ್ಯಾಬ್ ನಲ್ಲಿ ನಡೆದ ಮಾಹಿತಿ ಕಾರ್ಯಾಗಾರದಲ್ಲಿ ಪದವಿ ಪೂರ್ವ ವಿಭಾಗದ 9 ವಿದ್ಯಾರ್ಥಿಗಳು ಭಾಗವಹಿಸಿದರು.

**ಕಿರು ಪ್ರಹಸನ ಸ್ಪರ್ಧೆ 26/07/22**

ಮಂಗಳೂರು ವಿಶ್ವವಿದ್ಯಾನಿಲಯ ಸಂಧ್ಯಾ ಕಾಲೇಜು ಮಂಗಳೂರು. ಇಲ್ಲಿ ಆಜಾದಿ ಕಾ ಅಮೃತ ಮಹೋತ್ಸವ ದ ಪ್ರಯುಕ್ತ ನಡೆಸಿದ ಅಂತರ್ ಕಾಲೇಜು ಮಟ್ಟದ ಕಿರು ಪ್ರಹಸನ ಸ್ಪರ್ಧೆ ಅಭಿನಯ ಶೋಧ–2022 ಇದರಲ್ಲಿ ಶ್ರೀರಾಮ ವಿದ್ಯಾಕೇಂದ್ರದ ಪ. ಪೂ. ವಿಭಾಗದ ವಿದ್ಯಾರ್ಥಿಗಳು ದ್ವಿತೀಯ ಸ್ಥಾನವನ್ನು ಪಡೆದಿರುತ್ತಾರೆ.

**ಪ್ರಶಸ್ತಿ ಪತ್ರ ವಿತರಣೆ .– 18.07.22**

ಅಂತರ್ ಕಾಲೇಜು ಮಟ್ಟದ ವಿವಿಧ ಸ್ಪರ್ಧೆಗಳಲ್ಲಿ ಭಾಗವಹಿಸಿದ ವಿದ್ಯಾರ್ಥಿಗಳಿಗೆ ಶ್ರೀ ರಂಜಿತ್ ಶ್ರೀಮಾನ್, ಶ್ರೀ ಗಂಧರ್ವ ಶ್ರೀಮಾನ್ ಹಾಗೂ ಶ್ರೀಮತಿ ಶ್ರೀದೇವಿ ಮಾತಾಜಿ ಪ್ರಶಸ್ತಿ ಪತ್ರ ನೀಡಿ ಪ್ರೋತ್ಸಾಹಿಸಿದರು.

**Chem Shodhanaದಲ್ಲಿ ಪ್ರಥಮ 21.07.22**

ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಕಾಲೇಜು ಉಜಿರೆಯ PG Department of Chemistry ನಡೆಸಿದಂತಹ National Level Intercollegiate Chemistry Fest " Chem Shodhana " ಇದರಲ್ಲಿ ನಮ್ಮ ಕಾಲೇಜಿನ ಬಿ.ಎಸ್ಸಿ ವಿಭಾಗದ 8 ವಿದ್ಯಾರ್ಥಿಗಳು ಪಾಲ್ಗೊಂಡಿದ್ದು ,ದ್ವಿತೀಯ ಬಿ.ಎಸ್ಸಿ ವಿಭಾಗದ ವಿದ್ಯಾರ್ಥಿಗಳಾದ ಅಂಕಿತಾ ಮತ್ತು ಅರ್ಪಿತಾ "Chemistry ರಂಗೋಲಿ" ಸ್ಪರ್ಧೆಯಲ್ಲಿ ಪ್ರಥಮ ಬಹುಮಾನವನ್ನು ಗಳಿಸಿರುತ್ತಾರೆ ಹಾಗೆಯೇ ವಿದ್ಯಾರ್ಥಿಗಳಾದ ಅಕ್ಷಯ್, ವಿಭಾ ಶ್ರೀ, ದಿವ್ಯಶ್ರೀ, ಹರ್ಷಿತಾ ಎಸ್, ಸವಿತಾ ಕೆ ಆರ್, ಅಂಕಿತಾ ಕೆ ಎಂ, ಪ್ರತೀಕ್ಷಾ ಹಾಗೂ ಅರ್ಪಿತಾ ಕೆ ಎಂ **"Ice Breaker"** ಅಲ್ಲಿ ಪ್ರಥಮ ಸ್ಥಾನವನ್ನುಗಳಿಸಿ ಕಾಲೇಜಿಗೆ ಕೀರ್ತಿ ತಂದಿರುತ್ತಾರೆ.

**ಸಮಗ್ರ ಪ್ರಶಸ್ತಿ. – 22.07.22**

ಶ್ರೀನಿವಾಸ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ವಲಚ್ಚಿಲ್‌ನಲ್ಲಿ ನಡೆದ ರಾಷ್ಟ್ರ ಮಟ್ಟದ ಇಂಟರ್ ಕಾಲೇಜ್ ಫೆಸ್ಟ್ "ಶ್ರೀಯಾನ್ಸ್–2022" ನಲ್ಲಿ ವಿದ್ಯಾರ್ಥಿಗಳು ಭಾಗವಹಿಸಿ ಸಮಗ್ರ ಪ್ರಶಸ್ತಿ ಪಡೆದು ಕಾಲೇಜಿಗೆ ಕೀರ್ತಿ ತಂದಿರುತ್ತಾರೆ. ತೃತೀಯ ಬಿ.ಕಾಮ್ ವಿದ್ಯಾರ್ಥಿಗಲಾದ ಅನೂಪ್ ಹಾಗೂ ಸುಶಾಂತ್ ಫೋಟೋಗ್ರಫಿಯಲ್ಲಿ ಪ್ರಥಮ ಸ್ಥಾನ ಗಳಿಸಿರುತ್ತಾರೆ. ವಿದ್ಯಾರ್ಥಿಗಳಾದ ದೀಕ್ಷಿತಾ ಎಮ್, ಧನುಶ್ರೀ, ನಿರೀಕ್ಷಾ, ಹಿತೇಶ್, ಚೇತನ್, ಅಂಕಿತಾ, ಅರ್ಪಿತಾ, ತುಳಸಿ ಕುಮಾರಿ, ಭಾಗ್ಯಶ್ರೀ, ಪವಿತ್ರ, ನಿಶಾ, ಯಶಸ್ವಿ, ಸ್ವಾತಿ ಭಾಗವಹಿಸಿರುತ್ತಾರೆ.

**ವಿವಿಧ ಸ್ಪರ್ಧೆಗಳು – 23.07.22**

ಪ್ರದೀಪ್ತ ಸಾಂಸ್ಕೃತಿಕ ಸಂಘದ ವತಿಯಿಂದ ಕಾಲೇಜು ವಾರ್ಷಿಕೋತ್ಸವದ ಪ್ರಯುಕ್ತ ವಿವಿಧ ಸ್ಪರ್ಧೆಗಳನ್ನು ಆಯೋಜಿಸಲಾಯಿತು. ಸಂಸ್ಥೆಯ ಸ್ಥಾಪಕರಾದ ಡಾ ಪ್ರಭಾಕರ್ ಭಟ್ ಕಲ್ಲಡ್ಕ ಇವರು ಆಗಮಿಸಿ ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸಿದರು.

**Career guidance 25.07.22**

ವಿವೇಕಾನಂದ ಇಂಜಿನಿಯರಿಂಗ್ ಕಾಲೇಜಿನ ಉಪನ್ಯಾಸಕರಾದ ಶ್ರೀ ರಾಕೇಶ್ , ಸಹ ಪ್ರಾಧ್ಯಾಪಕರು , ಎಂ.ಬಿ.ಎ ಡಿಪಾರ್ಟ್ಮೆಂಟ್ ಹಾಗೂ ಶ್ರೀ ಶೈಲೇಶ್ ,ಉಪನ್ಯಾಸಕರು, ಎಂ.ಸಿ.ಎ ಡಿಪಾರ್ಟ್ ಮೆಂಟ್ ಇವರು ಅಂತಿಮ ವರ್ಷದ ಬಿ.ಕಾಂ ಹಾಗೂ ಬಿ.ಎಸ್ಸಿ ವಿಭಾಗಗಳ ವಿದ್ಯಾರ್ಥಿಗಳಿಗೆ ಎಂ.ಬಿ.ಎ ಹಾಗೂ ಎಂ.ಸಿ.ಎ ವೃತ್ತಿಗಳ ಕುರಿತು ಮಾಹಿತಿಯನ್ನು ನೀಡಿದರು. ಈ ಸಂದರ್ಭದಲ್ಲಿ ಉಪನ್ಯಾಸಕರಾದ ಶ್ರೀ ರಂಜಿತ್ ಶ್ರೀಮಾನ್ ಹಾಗೂ ಶ್ರೀಮತಿ ಕವಿತಾ ಮಾತಾಜಿ ಉಪಸ್ಥಿತರಿದ್ದರು.

**ಅಂತರ್‌ಕಾಲೇಜು ವಿಭಾಗಕ್ಕೆ ಆಯ್ಕೆ – 26.07.22**

ವಿವೇಕಾನಂದ ಕಾಲೇಜಿನಲ್ಲಿ ನಡೆದ ಅಂತರ್ ಕಾಲೇಜ್ ಮಟ್ಟದ ಸ್ಪರ್ಧೆಗಳಲ್ಲಿ ಚಿತ್ರಕಲೆಯಲ್ಲಿ ದ್ವಿತೀಯ ಬಿ.ಕಾಂ ವಿದ್ಯಾರ್ಥಿ ಶಿವನಿವಾಸ್ ಪ್ರಥಮ ಹಾಗೂ ತೃತೀಯ ಬಿ.ಕಾಂ ವಿದ್ಯಾರ್ಥಿನಿ ದೀಕ್ಷಿತಾ ಪೋಸ್ಟರ್ ಮೇಕಿಂಗ್ ಸ್ಪರ್ಧೆಯಲ್ಲಿ ದ್ವಿತೀಯ ಸ್ಥಾನ ಪಡೆದು ಅಂತರ್ ಘಟಕ ವಿಭಾಗಕ್ಕೆ ಆಯ್ಕೆಯಾಗಿದ್ದಾರೆ.

**ವಿಶೇಷ ಬೈಠಕ್ 20/07/2022**



ವಿದ್ಯಾಸಂಸ್ಥೆಯಲ್ಲಿ ಕಳೆದ ಅನೇಕ ವರ್ಷಗಳಿಂದ ಯಾ ತಾವು ನೇಮಕಾತಿಯಾದಂದಿನಿಂದ ಇಂದಿನವರೆಗೆ ನಮ್ಮ ವೈಯಕ್ತಿಕ ಬೆಳವಣಿಗೆ, ಕಲಿತ ಹೊಸ ವಿಷಯಗಳು, ಪ್ರೇರಣೆ ನೀಡಿದ ಅಂಶಗಳು, ಬೇಸರಗೊಂಡ ಕ್ಷಣಗಳು, ಹಿತವೆನಿಸಿದ ಸಂಗತಿಗಳು ಇತ್ಯಾದಿ ಹತ್ತು ಹಲವು ವಿಷಯಗಳನ್ನು ಸಂಸ್ಥೆಯ ಹಿರಿಯರೊಂದಿಗೆ ಮುಕ್ತವಾಗಿ ಹಂಚಿಕೊಳ್ಳುವ ವಿಶೇಷ **ಅನೌಪಚಾರಿಕ ಬೈಠಕ್** ವಿಭಾಗವಾರು ನಡೆಯಿತು. ಈ ಬೈಠಕ್‌ನಲ್ಲಿ ಹಿರಿಯರಾದ ಡಾ। ಪ್ರಭಾಕರ ಭಟ್, ಶ್ರೀ ನಾರಾಯಣ ಸೋಮಯಾಜಿ, ಶ್ರೀ ವಸಂತ ಮಾಧವ ಶ್ರೀಮಾನ್, ಶ್ರೀ ರಮೇಶ್ ಎನ್, ಶ್ರೀಮತಿ ಕಮಲಾ ಪ್ರಭಾಕರ ಭಟ್, ಶ್ರೀ ನಾಗೇಶ್ ಕಲ್ಲಡ್ಕ, ಶ್ರೀಮತಿ ಲಕ್ಷ್ಮೀ ರಘುರಾಜ್, ಮತ್ತು ವಿಭಾಗ ಪ್ರಮುಖರು ಉಪಸ್ಥಿತರಿದ್ದರು.

**ಬೈಠಕ್ ನಡೆದ ದಿನಗಳು**

| | |
|---|---|
| **ಪೂರ್ವಗುರುಕುಲ** | : 25.06.2022 |
| **ಪ್ರಾಥಮಿಕ ಶಾಲೆ** | : 27.06.2022 |
| **ಪ್ರೌಢಶಾಲೆ** | : 23.06.2022 |
| **ಸೆಕಂಡರಿ** | : 21.07.2022 |
| **ಪದವಿ ಪೂರ್ವ** | : 20.07.2022 |
| **ಪದವಿ** | : 07.07.2022 |



**ಕರಾಟೆ ಸ್ಪರ್ಧೆ 18.07.2022**

ಬೂರಜ್ ಆಂಗ್ಲ ಮಾಧ್ಯಮ ಶಾಲೆ ವಾಮದಪದವಿನಲ್ಲಿ ನಡೆದ ತಾಲೂಕು ಮಟ್ಟದ ಸ್ಪರ್ಧೆಯಲ್ಲಿ ಕಿಶನ್‌ಕುಮಾರ್ ದ್ವಿತೀಯ, ಮದನ್ ದ್ವಿತೀಯ, ಧನುಷ್‌ತೃತೀಯ ಸ್ಥಾನವನ್ನು ಪಡೆದಿರುತ್ತಾರೆ.




20.722ರಂದು ಸರಸ್ವತಿ ವಂದನೆಯಲ್ಲಿ ಬೆಂಗಳೂರಿನ ರಿಯಲ್‌ಎಸ್ಟೇಟ್ ಉದ್ಯಮಿ ಶ್ರೀ ಕಿರಣ್ ಪಾಟಿಲ್, ಶ್ರೀ ಲಿಂಗರಾಜು, ಶ್ರೀನಾಗರಾಜು, ಉಮಾನಂದ್ ಭಟ್ ಶಿರಸಿ ಜಿಲ್ಲಾ ಗೋ ಸೇವಾ ಪ್ರಮುಖರು, ಕೃಷಿಕರು ಉಪಸ್ಥಿತರಿದ್ದರು.




ಕಾರ್ಗಿಲ್ ವಿಜಯೋತ್ಸವ ದಿನದಂದು ಭೂಸೇನೆಯ ನಿವೃತ್ತ ಸೈನಿಕರಾದ ಜಗನ್ನಾಥ ರೈ ಅವರನ್ನು ಗೌರವಿಸಲಾಯಿತು. ವೇದಿಕೆಯಲ್ಲಿ ಶ್ರೀ ನೋಣಯ ಅಕ್ಷರದಾಸೋಹ ಅಧಿಕಾರಿಗಳು, ಸಂಚಾಲಕರು, ಸಹಸಂಚಾಲಕರು ಮುಖ್ಯೋಪಾಧ್ಯಾಯರು ಉಪಸ್ಥಿತರಿದ್ದರು.



9.27/07/2022 ಬಂಟ್ವಾಳ ತಾಲೂಕಿನ ಆಯ್ದ ಶಾಲೆಗಳ ಅಕ್ಷರದಾಸೋಹ ಪ್ರಮುಖರ ಒಂದು ದಿನದ ತರಬೇತಿ ಕಾರ್ಯಕ್ರಮದಲ್ಲಿ ಅಕ್ಷರದಾಸೋಹ ಅಧಿಕಾರಿಗಳು, ಡಾ। ಪ್ರಭಾಕರ ಭಟ್ ಕಲ್ಲಡ್ಕ, ಸಂಚಾಲಕರು, ಸಹಸಂಚಾಲಕರು, ಮುಖ್ಯೋಪಾದ್ಯಾಯರು ಉಪಸ್ಥಿತರಿದ್ದರು.



ಸಾ.ಹುಟ್ಟುಹಬ್ಬ-ಭಜನಾ, ಸಂಘಗಳ ಉದ್ಘಾಟನಾ ಕಾರ್ಯಕ್ರಮದಲ್ಲಿ ವಿದ್ಯಾಭಾರತಿ ನೈ.ಆ. ಶಿಕ್ಷಣ ಕ್ಷೇತ್ರಿಯ ಪ್ರಮುಖರು ಶ್ರೀ ವೆಂಕಟರಮಣ ರಾವ್ ಕಾರ್ಯಕ್ರಮದ ಮಹತ್ವವನ್ನು ತಿಳಿಸಿದರು. ಶ್ರೀ ಮೋಹನ್.ಡಿ.ಎಸ್, ಶ್ರೀಮತಿ ಕಮಲಾ ಪ್ರ.ಭಟ್, ಮುಖ್ಯೋಪಾದ್ಯಾಯಿನಿ ಉಪಸ್ಥಿತರಿದ್ದರು.



**ಪ್ರತಿಭಾ ಕಾರಂಜಿ ಜಾನಪದ ನೃತ್ಯಕಾರ್ಯಕ್ರಮ 30/07/202**

ಶಾಲಾ ಮಟ್ಟದ ಪ್ರತಿಭಾಕಾರಂಜಿ ಜಾನಪದ ನೃತ್ಯಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದು ವಿದ್ಯಾರ್ಥಿಗಳ ಪ್ರತಿಭೆಗೆ ವೇದಿಕೆ ಒದಗಿಸಿದೆ.

## ಪದವಿ ಪೂರ್ವ



ವಿನೋಬನಗರ ವಿವೇಕಾನಂದ ವಿದ್ಯಾಸಂಸ್ಥೆ ಸುಳ್ಯ ಇಲ್ಲಿ 21/07/22ರಂದು ನಡೆದ ವಿದ್ಯಾಭಾರತಿ ದ.ಕ ಜಿಲ್ಲಾ ಮಟ್ಟದ ಚದುರಂಗ ಸ್ಪರ್ಧೆಯ ತರುಣ ವಿಭಾಗದಲ್ಲಿ ಪ್ರಥಮ ವಿಜ್ಞಾನ ವಿಭಾಗದ ಕುಮಾರಿ ಅನ್ವಿತಾ ಇವರು ರಾಜ್ಯ ಮಟ್ಟಕ್ಕೆ ಆಯ್ಕೆಯಾಗಿರುತ್ತಾಳೆ.



**ಕಾರ್ಗಿಲ್ ವಿಜಯ ದಿವಸ 26/07/22**

ಈ ಕಾರ್ಯಕ್ರಮದಲ್ಲಿ ಅತಿಥಿಗಳಾಗಿ ಭಾಗವಹಿಸಿದ ಕರ್ನಾಟಕ ರಾಜ್ಯ ಕಾರ್ಯಕಾರಿಣಿ ಹಿಂದೂ ಜಾಗರಣಾ ವೇದಿಕೆಯ ಸದಸ್ಯರು ಶ್ರೀ ರಾಧಾಕೃಷ್ಣ ಅಡ್ಯಂತಾಯ ಇವರು ಕಾರ್ಯಕ್ರಮದ ಬಗ್ಗೆ ಮಾನಾಡಿದರು



26/07/22ರಂದು ವಿವೇಕಾನಂದ ಪ. ಪೂ. ಕಾಲೇಜ್ ನಲ್ಲಿ ಆಯೋಜಿಸಲಾದ ವಿದ್ಯಾಭಾರತಿ ಜಿಲ್ಲಾ ಮಟ್ಟದ ಟೇಬಲ್ ಟೆನ್ನಿಸ್ ಕ್ರೀಡಾ ಕೂಟದ ಬಾಲಕಿಯರ ವಿಭಾಗದಲ್ಲಿ ವಿದ್ಯಾರ್ಥಿನಿಯರು ದ್ವಿತೀಯ ಸ್ಥಾನ ಪಡೆದು ಪ್ರಶಸ್ತಿಗೆ ಭಾಜನಾರಾಗಿದ್ದಾರೆ.




ವಿವಿಧ ಸಂಘಗಳ ಉದ್ಘಾಟನಾ ಕಾರ್ಯಕ್ರಮದಲ್ಲಿ ವಿದ್ಯಾಭಾರತಿ ಕ್ಷೇತ್ರಿಯ ನೈ. ಆ. ಶಿ ಪ್ರಮುಖ್, ಶ್ರೀ ವೆಂಕಟರಮಣ ರಾವ್ ಮಂಕುಡೆ ಇವರು ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡಿದರು. ಆಡಳಿತ ಮಂಡಳಿಯ ಸದಸ್ಯರಾದ ಶ್ರೀಮತಿ ಮಲ್ಲಿಕಾ ಶೆಟ್ಟಿ, ದೈಹಿಕ ಶಿಕ್ಷಣ ಉಪನ್ಯಾಸಕರಾದ ಶ್ರೀ ಕರುಣಾಕರ ವೇದಿಕೆಯಲ್ಲಿ ಉಪಸ್ಥಿತರಿದ್ದರು.



ಭಾಸ್ಕರಾಚಾರ್ಯ ವಿಜ್ಞಾನ ಸಂಘದ ವತಿಯಿಂದ ನಡೆದ ವೇದ ಗಣಿತ ಕಾರ್ಯಾಗಾರದಲ್ಲಿ ಪ್ರೌಢಶಾಲೆಯ ಸಹ ಶಿಕ್ಷಕರಾದ ವಿನುತಾ ಮಾತಾಜಿ ವೇದಗಣಿತದ ಬಗ್ಗೆ ಮಾಹಿತಿ ನೀಡಿ-ದರು. ಗಣಿತಶಾಸ್ತ್ರ ಉಪನ್ಯಾಸಕರಾದ ಜಯಲಕ್ಷ್ಮಿ ಮಾತಾಜಿ ವೇದಿಕೆಯಲ್ಲಿ ಉಪಸ್ಥಿತರಿದ್ದರು.



ಕೃಷಿ ಕಾರ್ಯ ಚಟುವಟಿಕೆ: ಭಾರ್ಗವ ಕ್ರೀಡಾ ಸಂಘದ ವತಿಯಿಂದ ಸುಧೇಕಾರಿನಲ್ಲಿ ದಿನಾಂಕ 29/07/22ರಂದು ಕೃಷಿ ಕಾರ್ಯ ಚಟುವಟಿಕೆ ಪ್ರಾರಂಭಿಸಲಾಯಿತು. ಕ್ರೀಡಾ ಸಂಘದ ನಿರ್ದೇಶಕರಾದ ಶ್ರೀ ಕರುಣಾಕರ ಶ್ರೀಮಾನ್ ಮತ್ತು ಶ್ರೀ ಜಯರಾಮ ಸುಧೇಕಾರ್ ಇವರು ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡಿದರು.



**ಸಂಸ್ಥೆಯ ಹಿರಿಯರೊಂದಿಗೆ ಬೈಠಕ್. – 07.07.22**

ಸಂಸ್ಥೆಯ ಸಂಸ್ಥಾಪಕರಾದ ಡಾ ಪ್ರಭಾಕರ್ ಭಟ್ ಕಲ್ಲಡ್ಕ ಇವರೊಂದಿಗೆ ಪದವಿ ಕಾಲೇಜಿನ ಭೋಧಕ ಹಾಗೂ ಭೋಧಕೇತರ ಸಿಬ್ಬಂದಿಗಳ ಬೈಠಕ್ ಕಾಲೇಜಿನಲ್ಲಿ ನಡೆಯಿತು. ಸಂಚಾಲಕರು, ಸಹಸಂಚಾಲಕರು ಆಡಳಿತ ಮಂಡಳಿಯ ಸದಸ್ಯರು, ಪ್ರಾಂಶುಪಾಲರು ಉಪಸ್ಥಿತರಿದ್ದರು.




ಅ.ಭಾ.ವಿ. ಪರಿಷತ್ ಬಂಟ್ವಾಳ, ಕೆಎಂಸಿ ಆಸ್ಪತ್ರೆ ಮಂಗಳೂರು, ಇವರ ಸಹಯೋಗದೊಂದಿಗೆ "ಸ್ವರಾಜ್ಯ 75 ಹಾಗೂ ರಾಷ್ಟ್ರೀಯ ವಿದ್ಯಾರ್ಥಿ ದಿವಸ್" ಪ್ರಯುಕ್ತ ರಕ್ತದಾನ ಹಾಗೂ ನೇತ್ರದಾನ ಶಿಬಿರ 14.07.22ರಂದು ನಡೆಸಲಾಯಿತು. ರಾಜ್ಯ ಕಾರ್ಯದರ್ಶಿಗಳಾದ ಶ್ರೀ ಮಣಿಕಂಠ ಕಳಸ ರಕ್ತದಾನ ಮಾಡಿ ಚಾಲನೆಯನ್ನು ನೀಡಿದರು.




ಶ್ರೀ ಧ.ಮ. ಕಾಲೇಜು ಉಜಿರೆಯ PG Department of Chemistry ನಡೆಸಿದಂತಹ National Level Intercollegiate Chemistry Fest " Chem Shodhana " ಇದರಲ್ಲಿ ಬಿ.ಎಸ್ಸಿ ವಿಭಾಗದ 8 ವಿದ್ಯಾರ್ಥಿಗಳು ಪಾಲ್ಗೊಂಡಿದ್ದು, ದ್ವಿ.ಬಿ.ಎಸ್ಸಿ ವಿಭಾಗದ ವಿದ್ಯಾರ್ಥಿಗಳು ವಿವಿಧ ಸ್ಪರ್ಧೆಗಳಲ್ಲಿ ಪ್ರಶಸ್ತಿ ಪಡೆದಿರುತ್ತಾರೆ



**ಮಿಲಾಗ್ರಿಸ್ ಕಾಲೇಜ್‌ನಲ್ಲಿ ಪ್ರಥಮ.– 23.07.22**

ಮಿಲಾಗ್ರಿಸ್ ಕಾಲೇಜ್ ಹಂಪನಕಟ್ಟೆ ಯಲ್ಲಿ ನಡೆದ National ಲೆವೆಲ್ ಇಂಟರ್ ಕಾಲೇಜ್ ಫೆಸ್ಟ್ ನಲ್ಲಿ Art out of waste ಸ್ಪರ್ಧೆಯಲ್ಲಿ ನಮ್ಮ ಕಾಲೇಜ್‌ನ ಬಿ.ಕಾಂ ವಿದ್ಯಾರ್ಥಿಗಳಾದ ದೀಕ್ಷಿತಾ ಹಾಗೂ ಶಿವನಿವಾಸ್ ಪ್ರಥಮ ಪ್ರಶಸ್ತಿ ಪಡೆದಿರುತ್ತಾರೆ.




ಪ್ರಭಾಸ ಮಾನವಿಕ ಸಂಘ ಹಾಗೂ ಎಬಿವಿಪಿ ಘಟಕದ ವತಿಯಿಂದ ಕಾರ್ಗಿಲ್ ವಿಜಯೋತ್ಸವ" ಆಚರಣೆಯಲ್ಲಿ(26.07.22) ಪ್ರೌಢಶಾಲೆಯ ಶಿಕ್ಷಕರಾದ ಶ್ರೀ ಜಿನ್ನಪ್ಪ ಶ್ರೀಮಾನ್ ಇವರು ಆಗಮಿಸಿ ಕಾರ್ಗಿಲ್ ಯುದ್ಧದಲ್ಲಿ ಮಡಿದ ವೀರ ಯೋಧರ ತ್ಯಾಗ ಬಲಿದಾನ ವಿದ್ಯಾರ್ಥಿಗಳಿಗೆ ತಿಳಿಸಿದರು . .




**ಅಂತರ್‌ರಾಷ್ಟ್ರೀಯ ಮಟ್ಟಕ್ಕೆ ಆಯ್ಕೆ – 30.07.22**

ಪ್ರಥಮ ಬಿಸಿಎ ವಿದ್ಯಾರ್ಥಿನಿ ಕು.ಯಶಸ್ವಿ ಕುದುಮನ್ ಗುಜರಾತಿನಲ್ಲಿ ನಡೆದ ರಾಷ್ಟ್ರೀಯ ಸ್ಪರ್ಧೆಯಲ್ಲಿ ಭಾಗವಹಿಸಿ ತಂಡಕ್ಕೆ ಪ್ರಥಮ ಸ್ಥಾನ ಹಾಗೂ ಮಹಿಳೆಯರ ವಿಭಾಗದಲ್ಲಿ ತೃತೀಯ ಸ್ಥಾನ ಪಡೆದು ಅಂತರಾಷ್ಟ್ರೀಯ ಮಟ್ಟಕ್ಕೆ ಆಯ್ಕೆ.

## ಆಜಾದಿ ಕಾ ಅಮೃತ ಮಹೋತ್ಸವ ಹಾಗೂ ವಾರ್ಷಿಕೋತ್ಸವದ ನಿಮಿತ್ತ ನಡೆದ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮ









ಶುಭಕೋರುವ : **ಶ್ರೀರಾಮ ಸೌಹಾರ್ದ ಸಹಕಾರಿ ನಿಯಮಿತ**

ಪ್ರಧಾನ ಕಚೇರಿ: ಹನುಮಾನ್ ನಗರ, ಕಲ್ಲಡ್ಕ, ಬಂಟ್ವಾಳ ತಾಲೂಕು, 574222 ದೂ: 8255275173, 8147249174

ಶಾಖೆ : ಶ್ರೀರಾಮ ವಾಣಿಜ್ಯ ಸಂಕೀರ್ಣ ರಾಮನಗರ ಕಲ್ಲಡ್ಕ

ಕಲ್ಲಡ್ಕ ಶ್ರೀರಾಮ ವಾಣಿಜ್ಯ ಸಂಕೀರ್ಣದ ರಾಮ ನಗರ ಶಾಖೆಯಲ್ಲಿ E-Stamping ಠಸೆ ಕಾಗದ ಸೌಲಭ್ಯವಿದೆ

ಚಿನ್ನಾಭರಣ ಸಾಲ – 10.5%
ಜಾಮೀನು ಸಾಲ – 16%
ಅಡವು ಸಾಲ – 13%
ವಾಹನ ಸಾಲ – 11.5%
ಗೃಹ ನಿರ್ಮಾಣ ಸಾಲ – 11%

ಠೇವಣಿ ಮೇಲೆ ಆಕರ್ಷಕ ಬಡ್ಡಿ ದರ
91 ದಿನಗಳವರೆಗೆ – 5.5%
92 ರಿಂದ 181 ದಿನಗಳು – 6%
182ರಿಂದ 364 ದಿನಗಳು – 7%
1 ವರ್ಷ ಮೇಲ್ಪಟ್ಟು – 7.5%

ಸೌಲಭ್ಯಗಳು
ಆವರ್ತನ ಠೇವಣಿ (R.D)
ಸಂಚಯ ಠೇವಣಿ (S.D)
ನಿರಂತರ ಠೇವಣಿ (ಪಿಗ್ಮಿ)

ಹಿರಿಯ ನಾಗರಿಕರಿಗೆ, ಮಾಜಿ ಯೋಧರಿಗೆ ಮತ್ತು ವಿಧವೆಯರಿಗೆ 0.5% ಬಡ್ಡಿ ಹೆಚ್ಚಿಗೆ ನೀಡಲಾಗುವುದು

Postal Regn No. PTR/136/2022-24 Licensed to Post without pre-payment License No: SK/WPP/PTR/117/2022-24

ಸರಯೂ

KARKAN/2014/62363
Posted at Kalladka P.O. on 10th and 15th of Every month

Vol. : 9 Issue : 3 Rs. 10/-

SRI RAMA VIDYAKENDRA TRUST (R.) Hanuman Nagar, Kalladka, Bantwal Tq., Dakshina Kannada, Karnataka 574 222
Website : www.srvk.org E-mail : info@srvk.org

BOOK POST

ಸವಿಧೇ,

Sarayu Kannada Monthly Edited and Published and Printed by B. Narayana Somayaji on behalf of Sri Rama Vidyakendra Trust, Hanuman Nagara, Kalladka, Bantwal Tq, Dakshina Kannada - 574 222. Phone : 9449728763 Printed at Digantha Mudrana Ltd. Magaluru 575008, Bantwal Tq., Dakshina Kannada, Karnataka. Registration No. : KARKAN/2014/62363